ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂ ಸ್ವಾಧೀನ

608 - ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿವರೆ?

ಅ) 1985ರಿಂದ ಇಂದಿನವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂ ಸ್ವಾಧೀನದಿಂದ ಕೈ ಬಿಟ್ಟ ಜಮೀನುಗಳ ಒಟ್ಟು ಸಂಖ್ಯೆ (ವರ್ಷವಾರು ವಿವರ ನೀಡಿರಿ

ಆ) ಭೂ ಸ್ವಾಧೀನದಿಂದ ಕೈ ಬಿಡಲು ಅನುಸರಿಸಿದ ಮಾನದಂಡಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಪ್ರಾಧಿಕಾರದ ಅಧಿಸೂಚನೆಯಿಂದ ಹೊರತು ಪಡಿಸಿರುವ ಜಮೀನು: ಆಸ್ತಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ಆಸ್ತಿಗಳ ಸಂಖ್ಯೆ	ಒಟ್ಟು ವಿಸ್ತೀರ್ಣ ಎ ಗು
1985	03	9 - 32
1986	77	195 - 03
1987	03	04 - 27
1988	01	1 - 20
1989	05	35 - 10
1990	01	0 - 14
1991	19	42 - 28
1992	39	36 - 06
1993	-	- - -
1994	71	*230 -10
ಒಟ್ಟು	249	636 - 30

*ಇದರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ 'ಡಿ' ಗ್ರೂಪ್ ನೌಕರರ ಸಹಕಾರ ಸಂಘದ ಪರವಾಗಿ 125 ಎ 20 ಗು ಜಮೀನನ್ನು ಭೂ ಸ್ವಾಧೀನದಿಂದ ಕೈ ಬಿಟ್ಟಿರುವುದು ಒಳಗೊಂಡಿದೆ.

ಆ) ಭೂಮಿಯ ಮೇಲೆ ಪ್ರಸ್ತುತ ಇರುವ ಕಟ್ಟಡಗಳು, ಹಲವಾರು ಶಾಸನಗಳನ್ವಯ ಸರ್ಕಾರವು ಹೊರಡಿಸಿದ ರಿಯಾಯಿತಿ, ದತ್ತಿ ಸಂಸ್ಥೆಗಳು, ಧಾರ್ಮಿಕ ಮತ್ತು ವಿದ್ಯಾ ಸಂಸ್ಥೆಗಳ ಭೂ ಉಪಯೋಗ ಇವುಗಳನ್ನು ಗಣನೆಗೆ ತೆಗೆದುಕೊಂಡು ಅಧಿಸೂಚನೆಯಿಂದ ಹೊರತುಪಡಿಸುವ ಬೇಡಿಕೆಗಳನ್ನು ಪರಿಗಣಿಸಲಾಗಿದೆ.

ಗೋಕಾಕ್ ನಗರದಲ್ಲಿ ನಡೆದ ಲೂಟಿ ಪ್ರಕರಣ

800 - ಶ್ರೀ ವಿ.ಎನ್. ಕೌಜಲಗಿ (ಅರಬಾವಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994ರ ಡಿಸೆಂಬರ್ ತಿಂಗಳಿನಲ್ಲಿ ಗೋಕಾಕ್‌ದಲ್ಲಿ ನಡೆದ ದೊಂಬಿ, ಲೂಟಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ.*

ಆ) *ಈ ಪ್ರಕರಣದಲ್ಲಿ ಹಾನಿಗೊಳಗಾದವರಿಗೆ ಸರ್ಕಾರ ಪರಿಹಾರ ನೀಡಲು ಯಾವ ಕ್ರಮ ಕೈಗೊಂಡಿರುವುದು (ವಿವರ ನೀಡುವುದು)*

ಇ) *ಇದಕ್ಕೆ ಸಂಬಂಧಪಟ್ಟಂತೆ ಅಪರಾಧಿಗಳನ್ನು ಬಂಧಿಸಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಪಿ,ಜಿ,ಆರ್. ಸಿಂಧ್ಯ (ಗೃಹ ಸಚಿವರು) :

ಅ) 1994ರ ಡಿಸಂಬರ್ ಪ್ರಕಟವಾದ ಚುನಾವಣಾ ಫಲಿತಾಂಶದ ಹಿನ್ನಲೆಯಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಸೇರಿದ ಕಾರ್ಮಿಕರ ಗುಂಪುಗಳು ಘರ್ಷಣೆಯಲ್ಲಿ ತೊಡಗಿದ್ದವು. ಈ ಅಹಿತಕರ ಘಟನೆಗಳು ನಡೆದ ವೇಳೆ ಸಂದರ್ಭೋಚಿತವಾಗಿ ಪೋಲೀಸರು ಅವಶ್ಯ ಕಾನೂನು ಕ್ರಮ ತೆಗೆದುಕೊಂಡಿದ್ದರಿಂದ ಅನೇಕ ಸಾವು-ನೋವು, ಆಸ್ತಿ-ಪಾಸ್ತಿಗಳಿಗೆ ಹಾನಿ ಉಂಟಾಗುವುದನ್ನು ತಪ್ಪಿಸಲಾಯಿತು. ನಂತರ, ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ವೈದ್ಯಕೀಯ ರಾಜ್ಯ ಸಚಿವರ ಉಪಸ್ಥಿತಿಯಲ್ಲಿ ಇನ್ನಿತರ ಸ್ಥಳೀಯ ಮುಖಂಡರುಗಳನ್ನೊಳಗೊಂಡ ಒಂದು ಶಾಂತಿಪಾಲನಾ ಸಮಿತಿಯ ಸಭೆಯನ್ನು ನಡೆಸಲಾಯಿತು. ಇದಲ್ಲದೆ, ಗೋಕಾಕ್ ಮಿಲ್ಲಿನ ಆಡಳಿತ ಮಂಡಳಿ ಮತ್ತು ಪ್ರತಿನಿಧಿಗಳನ್ನೊಳಗೊಂಡ ಸಭೆಯನ್ನು ಕರೆದು, ಪರಸ್ಪರ ಒಂದು ಒಡಂಬಡಿಕೆಯನ್ನು ಮಾಡಿ, ಉಭಯ ಪಂಗಡಗಳ ನಡುವೆ ಉಂಟಾಗಿದ್ದ ಸಮಸ್ಯೆಯನ್ನು ಪರಿಹರಿಸಲಾಯಿತು. ಪ್ರಸ್ತುತ ಗಲಭೆ ಪ್ರದೇಶದಲ್ಲಿ ಪರಿಸ್ಥಿತಿ ಶಾಂತವಾಗಿದ್ದು, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲಾಗಿದೆ.

ಆ) ಹಾಲಿ ಕಾನೂನಿನ್ವಯ ಇಂಥಹ ಪ್ರಕರಣಗಳಲ್ಲಿ ಸಂತ್ರಸ್ತರೀಥವರಿಗೆ ಸರ್ಕಾರದಿಂದ ಯಾವುದೇ ಪರಿಹಾರ ನೀಡಲು ಅಸ್ಪದವಿಲ್ಲ.

ಇ) ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ 15 ಜನ ಆಪಾದಿತರನ್ನು ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಕಳುಹಿಸಿದ್ದು, ಅವರು ನ್ಯಾಯಾಲಯದಿಂದ ಜಾಮೀನಿನ ಮೇಲೇ ಬಿಡುಗಡೆಯಾಗಿರುತ್ತಾರೆ. ಈ ಪ್ರಕರಣದಲ್ಲಿ 27 ಪೋಲೀಸ್ ಕೇಸುಗಳನ್ನು ಕಾನೂನಿನ್ವಯ ದಾಖಲು ಮಾಡಲಾಗಿದ್ದು, ಅವುಗಳ ತಪಾಸಣಾ ಕಾರ್ಯ ಪ್ರಗತಿಯಲ್ಲಿದೆ, ಮುಂದಿನ ಕ್ರಮ ಕುರಿತು, ಅಂತಿಮ ವರದಿ ಕಾಯ್ದಿರಿಸಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಸಾರಾಯಿ ಮಾರಾಟ

835 - ಶ್ರೀ ವಿ.ಎಸ್. ಕೌಜಲಗಿ (ಅರಭಾವಿ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗೋಕಾಕ್ ತಾಲ್ಲೂಕಿನಲ್ಲಿ ಅಬಕಾರಿ ಗುತ್ತಿಗೆದಾರರು ಸರ್ಕಾರದಿಂದ ಮಾನ್ಯತೆ ಪಡೆದಿರುವ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು (ಪ್ರತಿಯೊಂದು ಹಳ್ಳಿಗಳ ಹಾಗೂ ಅಲ್ಲಿರುವ ಸಾರಾಯಿ ಅಂಗಡಿಗಳ ಪಟ್ಟಿಯನ್ನು ನೀಡುವುದು)*

ಆ) *ಗೋಕಾಕ ತಾಲ್ಲೂಕಿನಲ್ಲಿ ಚಿಲ್ಲರೆ ಸಾರಾಯಿಯನ್ನು ಪ್ಲಾಸ್ಟಿಕ್ ಪ್ಯಾಕೆಟಗಳಲ್ಲಿ ತುಂಬಿ ಮಾರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮಗಳೇನು?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿಗಳು) :

ಅ) 55 ವಿವರಗಳನ್ನು ಅನುಬಂಧದಲ್ಲಿ ನೀಡಲಿಗಿದೆ.

ಆ) ಹೌದು, ಕೆಲವು ಕಡೆಗಳಲ್ಲಿ ಮಾತ್ರ.